ಶ್ರೀ ಡಿ. ಕೆ. ನಾಯ್ಕರ್ —ನನ್ನ ಉತ್ತರ ಸರಳವಾಗಿದೆ. ಅವರು ಪ್ರಶ್ನೆಯಲ್ಲಿ 85 ಸಾವಿರ ರೂಪಾಯಿಗಳನ್ನು ಚಿಕ್ಕಬಳ್ಳಾಪುರದ ಮಾಜಿ ಪುರಸಭಾಧ್ಯಕ್ಷರಾದ ಶ್ರೀ ವಿ. ವೆಂಕಟರಾಯಪ್ಪನವರ ವಿರುದ್ಧ 85 ಸಾವಿರ ರೂಪಾಯಿಗಳ ಸರ್‌ಚಾರ್ಜ್ ವಿಧಿಸಿದ್ದಾರೆಯೇ ಎಂದು ಕೇಳಿದ್ದರು. ಅದಕ್ಕೆ ನಾನು ಹಾದು ಎಂದು ಉತ್ತರ ಕೊಟ್ಟಿದ್ದೇನೆ. ಹೀಗಯೇ ಅವರು ತಮ್ಮ ಪ್ರಶ್ನೆಯಲ್ಲಿ ಏನು ಕೇಳಿದ್ದಾರೆ ಅದಕ್ಕೆಲ್ಲಾ ಉತ್ತರ ಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ.—ಈಗ ನಾನು ತಮ್ಮನ್ನು ಕೇಳುವುದು ಏನೆಂದರೆ 1968-69, 71-72, 72-73ನೇ ಇಸವಿಯಲ್ಲಿ ಸ್ಪೆಷರ್ ಆಡಿಟ್ ಆಗಿರುವುದು ನಿಜವೇ ? ಮತ್ತು ಆಡಿಟ್ ರಿಪೋರ್ಟ್‌ನಲ್ಲಿ 29 ಸಾವಿರ ರೂಪಾಯಿಗಳು ಮತ್ತು 85 ಸಾವಿರ ರೂಪಾಯಿಗಳನ್ನು ಬಿಟ್ಟು ಇನ್ನೂ ಹೆಚ್ಚಿನ ಹಣವನ್ನು ಸರ್‌ಚಾರ್ಜ್ ಮಾಡಬೇಕು ಎಂದು ಆಡಿಟ್ ರಿಪೋರ್ಟ್‌ನಲ್ಲಿ ನಮೂದಿಸಿರುವುದು ನಿಜವೆ?

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ. 1976 ರಿಂದಲೇ ಆಡಿಟ್ ಮಾಡಿದ್ದಾರೆ. ಯಾವ ಯಾವ ಐಟಂ ಮೇಲೆ ಸರ್ಚಾರ್ಜ್ ಮಾಡಬೇಕು ಎಂದು ಹೇಳಿದ್ದಾರೆ. ಇದನ್ನು ಡಿ.ಸಿಯವರು ಮಾಡುತ್ತಾ ಇದ್ದಾರೆ. ಇದು ನೆನ್ನೆಯಿಂದ ನಡೆಯುತ್ತಾ ಇದೆ. ಆದುದರಿಂದ ಇದರ ಬಗ್ಗೆ ಹೇಳುವುದಕ್ಕೆ ಆಗುವುದಿಲ್ಲ,

ಶ್ರೀ ಸಿ. ಬೈರೇಗೌಡ.—ಹಾಗಾದರೆ 1968-69 ನೇ ಇಸವಿಯಿಂದ 1972-73 ನೇ ಇಸವಿವರೆಗೆ ಇರತಕ್ಕಂಥ ಆಡಿಟ್ ವರದಿಗಳನ್ನು ಈ ಸಭೆಯ ಟೇಬಲ್ ಮೇಲೆ ಇಡಲಕ್ಕೆ ಸಾಧ್ಯವೇ?

ಶ್ರೀ ಡಿ.ಕೆ. ನಾಯ್ಕರ್.—ಆಡಿಟ್ ರಿಪೋರ್ಟ್ ಪಬ್ಲಿಕ್ ಡಾಕ್ಯುಮೆಂಟ್ ಇದಬಹುದು.

ಶ್ರೀ ವಿ.ಎನ್. ಪಾಟೀಲ್.—(ಡಿ) ಮತ್ತು (ಇ) ಪ್ರಶ್ನೆಗೆ ಉತ್ತರ ಕೊಡುತ್ತಾ 'ಎಸ್' ಎಂದು ಹೇಳಿದ್ದೀರಿ. ಇದರಿಂದ ಸ್ಪೀಪರ್ಸ್ ಕ್ವಾರ್ಟರ್ಸ್ ಕಟ್ಟಿಲ್ಲ ಎಂದು ಓಪ್ಪಿದಂತೆ ಆಯಿತು. ಇಲ್ಲಿ ಆ ಅಮೌಂಟ್‌ನ್ನು ಏನು ಮಿಸ್ ಅಪ್ರೊಪ್ರಿಯೇಷನ್ ಮಾಡಿದ್ದಾರೆ ಅದನ್ನು ಮೊದಲು ರಿಪಾಸಿಟ್ ಮಾಡಿ ಎಂದು ವಾದ ತೆಗೆದಿದ್ದಾರೆ. ಮಿಸ್‌ಅಪ್ರೊಪ್ರಿಯೇಟ್ ಮಾಡಿದಂತಹ ಅಧಿಕಾರಿ ಅಥವಾ ಪ್ರೆಸಿಡೆಂಟ್ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ಇದರ ಬಗ್ಗೆ ಅಪೆಲೆಟ್ ಅಥಾರಿಟಿಗೆ ಹೋಗಿದ್ದರೆ ಅವರು ಏನು ನಿರ್ಣಯ ಕೊಟ್ಟಿದ್ದಾರೆ ?.

ಶ್ರೀ ಡಿ. ಕೆ. ನಾಯ್ಕರ್.—ಆಡಿಟ್ ವರದಿ ಪ್ರಕಾರ 45 ಸಾವಿರ ರೂಪಾಯಿಗಳನ್ನು ಸ್ಪೀಪರ್ಸ್‌ಗೋಸ್ಕರ ತೆಗೆದಿದ್ದು ಅಬ್‌ಜಕ್ಷನ್ ಸರಿ ಇದೆ. ಸರ್ಚಾರ್ಜ್ ಮಾಡುವಾಗ ಡೆಪ್ಯುಟಿ ಕಮಿಷನರ್ ಸಂಪೂರ್ಣವಾಗಿ ಪರಿಶೀಲನೆಮಾಡಿದ್ದಾರೆ, 45 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿಲ್ಲ. ಕೆಲವೊಂದು ರಖಂಗೆ ಖರ್ಚುಮಾಡಿಲ್ಲ. ಮತ್ತು ಕೆಲವು ಮೆಟೀರಿಯಲ್ಸ್‌ನ್ನು ಪರ್ಚೇಸ್ ಮಾಡಿದ್ದಾರೆ, ಅದಕ್ಕೆ ಅಕೌಂಟ್ ಇದೆ. ಮಿಕ್ಕಿದ್ದಕ್ಕೆ ಹಣ ಖರ್ಚುಮಾಡಿಲ್ಲ ಎಂದು ಸರ್ಚಾರ್ಜ್‌ನಲ್ಲಿ ಈ ಐಟಂಗಳನ್ನು ತೆಗೆದುಹಾಕಿದ್ದಾರೆ.

ಶ್ರೀ ಸಿ. ಬೈರೇಗೌಡ.—ಈಗ ತಾವು ಈ ಹಣ ಖರ್ಚುಮಾಡಿಲ್ಲ ಎಂದು ಹೇಳಿದಿರಿ, ಎಷ್ಟು ಮೊತ್ತದ ಮೆಟೀರಿಯಲ್ಸ್ ಈಗ ಸದ್ಯಕ್ಕೆ ಇದೆ, ಎಷ್ಟು ಹಣ ಖರ್ಚಾಗಿದೆ ?

ಶ್ರೀ ಡಿ. ಕೆ. ನಾಯ್ಕರ್ —ನನಗೆ ದೊರಕಿದ ಮಾಹಿತಿ ಪ್ರಕಾರ ರೂ. 19,789—85 ಮೊತ್ತದ ಮೆಟೀರಿಯಲ್ಸ್ ಇವೆ ಎಂದು ತಿಳಿದು ಬಂದಿದೆ.

Levy of Octroi on Silk cocoons

517. SRI C. BYREGOWDA (Vemgal).—Will the Minister for Municipal Administration and Political Pensions be pleased to state —

(*a*) whether it is a fact that Vijayapura, Ramanagaram and other Municipalities have levied octroi on silk cocoons.

(*b*) whether it is also a fact that the remaining Municipalities also propose to levy octroi on silk cocoons.

(*c*) whether Government is aware of the hardship caused to the rearers as a result of levy of octroi on silk cocoons,

(*d*) if so, the measures taken to relieve the rearers from this hardship ?

SRI D. K. NAIKAR (Minister for Municipal Administration and Political Pensions).—

(*a*) Yes.

(*b*) No proposals are yet received except three of T.M.C. Channapatna, Kanakapura and Chintamani.

(*c*) No.

(*d*) Does not arise in view of (*c*).

ಶ್ರೀ ಸಿ. ಬೈರೇಗೌಡ.—ಇದರ ಜೊತೆಗೆ ಇನ್ನೂ ಅನೇಕ ಮುನಿಸಿಪಾಲಿಟಿಗಳು ಈಗ ಆಕ್ಟ್ರಾಯನ್ನು ಹಾಕುವುದಕ್ಕೆ ಹೊರಟಿದ್ದಾರೆ. ಯಾವ ಮುನಿಸಿಪಾಲಿಟಿಯೂ ಕೂಡ ರೈತರು ರೇಷ್ಮೆಗೂಡನ್ನು ತಂದರೆ ಯಾವ ಸೌಕರ್ಯವನ್ನೂ ಮಾಡಿಕೊಟ್ಟಿಲ್ಲ. ಯಾವ ಸೌಕರ್ಯವನ್ನೂ ಮಾಡಿಕೊಡದೆ ಆಕ್ಟ್ರಾಯನ್ನು ಹಾಕುವುದರಿಂದ ರೈತರಿಗೆ ಹೊರೆಯಾಗುತ್ತದೆ, ಇದು ನ್ಯಾಯ ಬದ್ಧವಲ್ಲ. ಅದುದರಿಂದ ಇದನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

† ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ ಕಾನೂನು ಪ್ರಕಾರ ಈ ಆಕ್ಟ್ರಾಯನ್ನು ಲೆವಿ ಮಾಡುವಂಥ ಅಧಿಕಾರ ಮುನಿಸಿಪಾಲಿಟಿಗಿದೆ ಮುನಿಸಿಪಾಲಿಟಿಯವರು ಎಷ್ಟು ಪರ್ಸೆಂಟ್ ಹಾಕಬೇಕು ಎಂದು ನಿರ್ಣಯ ಪಾಸ ಮಾಡಿ ಸರ್ಕಾರಕ್ಕೆ ಅಪ್ರೂವಲ್‌ಗೆ ಕಳಿಸಿಕೊಡುತ್ತಾರೆ ಆ ಪ್ರಕಾರ ಅಪ್ರೂವ್ ಮಾಡಿ ಕಳಿಸಿಕೊಡುವಂಥ ವಿಧಾನ ಕಾನೂನಿನಲ್ಲಿದೆ. ಸೌಕರ್ಯಗಳನ್ನು ಕೊಡಲಿಲ್ಲ ಎಂದರೆ ಅದನ್ನು ಪೂರೈಕೆ ಮಾಡುವಂಥ ವಿಷಯ ಬೇರೆ. ಎಲ್ಲೆಲ್ಲ ಸೌಕರ್ಯಗಳನ್ನು ಕೊಡಲಿಲ್ಲ ಎಂದರೆ ಅಲ್ಲಿ ಕಟ್ಟಿಸಬಹುದು, ಟ್ಯಾಕ್ಸ್ ಬೇಡ ಎನ್ನುವುದು ಇನ್ನೊಂದು ಪ್ರಶ್ನೆ. ಟ್ಯಾಕ್ಸ್ ಹಾಕದೇಹೋದರೆ ಮುನಿಸಿಪಾಲಿಟಿಗಳು ತಮ್ಮ ಆರ್ಥಿಕ ಸುಧಾರಣೆ ಮಾಡಿಕೊಳ್ಳುವಂಥ ಪರಿಸ್ಥಿತಿ ಬರುವುದಿಲ್ಲ. ಟ್ಯಾಕ್ಸ್ ಹಾಕದೇ ಹೋದರೆ ಈಗ ಪೆಡ್ ಬೇಕು ಎಂದರೆ ಅದಕ್ಕೆ ಎಲ್ಲಿಂದ ತರುವುದು ?

ಶ್ರೀ ಸಿ. ಬೈರೇಗೌಡ.—ಸಂತೆಗಳಲ್ಲಿ ಷೆಲ್ಟರ್ಸ್ ಕಟ್ಟಿರುತ್ತಾರೆ, ಟ್ಯಾಕ್ಸ್ ಹಾಕುತ್ತಾರೆ. ಆದರೆ ಇಲ್ಲಿ ಯಾವ ಸೌಕರ್ಯವನ್ನೂ ಇಲ್ಲಿಯವರೆಗೆ ಮಾಡಿಲ್ಲ.

ಅಧ್ಯಕ್ಷರು.—ಸೌಲಭ್ಯ ಕೇಳುವುದು ಬೇರೆ, ಟ್ಯಾಕ್ಸ್ ಹಾಕುವುದು ಬೇರೆ, ಟ್ಯಾಕ್ಸ್ ಕೊಟ್ಟರೆ ಸೌಲಭ್ಯ ಸಿಕ್ಕುವುದು ಎಂದು ಮಾನ್ಯ ಮಂತ್ರಿಗಳು ಹೇಳಿದರಲ್ಲ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮಂತ್ರಿಗಳು ಇದೇ ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದಾರೆ ಮುನಿಸಿಪಾಲಿಟಿಯವರು ಯಾವ ಸೌಲಭ್ಯವನ್ನೂ ಕೊಡದೆ ರೈತರಿಂದ ಲಕ್ಷಾಂತರ ರೂಪಾಯಿ ಹಣವನ್ನು ಕೊಳ್ಳೆಹೊಡೆಯುತ್ತಿದ್ದಾರೆ. ಸೂರೆ ಮಾಡುತ್ತಿದ್ದಾರೆ. ಕೋರಾರದಲ್ಲಿ 2 ಪರ್ಸೆಂಟ್ ಟ್ಯಾಕ್ಸ್‌ನ್ನು ಹಾಕುತ್ತಾರೆ ಎಂದು ಪ್ರಪೋಸಲ್ ಬಂದಿದೆ ಎಂದು ಗೊತ್ತಾಗಿದೆ. ಒಂದು ಕಡೆ ಸರ್ಕಾರದವರು, ಇನ್ನೊಂದು ಮುನಿಸಿಪಾಲಿಟಿಯವರು ರೈತರನ್ನು ಸುಲಿಗೆ ಮಾಡಿದರೆ ಅವರ ಗತಿ ಏನಾಗಬೇಕು ?

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ, ಕಾನೂನಿನಲ್ಲಿ 2 ಪರ್ಸೆಂಟ್ ಆಡ್ವಾಲರಂ ಇದ್ದರೂ ಕೂಡ ಮೊನ್ನೆ ಅಪ್ರೂವಲ್ ಕೊಟ್ಟಿದೆ ಆದರೆ ಮುನಿಸಿಪಾಲಿಟಿಯವರು 2 ಪರ್ಸೆಂಟ್ ಹಾಕುತ್ತಾ ಇಲ್ಲ. ಅರ್ಧ ಪರ್ಸೆಂಟ್ ಮಾಡಿದ್ದಾರೆ. ನಾನು ಹೇಳಿದಹಾಗೆ ಸೌಲಭ್ಯವನ್ನು ಒದಗಿಸ ಬೇಕಾದರೆ ಕಾನ್ಸ್ಟಿಟ್ಯೂಯೆನ್ಸಿಯವರು ಮಾಡುತ್ತಾರೆ ಎರ್ನಾ ದೋಚಿಕೊಂಡು ಹೋಗುತ್ತಿದ್ದಾರೆ, ಕೊಳ್ಳೆ ಹೊಡೆಯುತ್ತಿದ್ದಾರೆ ಎಂದು ಆಪಾದನೆ ಮಾಡುವುದು ಸರಿಯಲ್ಲ ಎಂದು ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಈಗ ಯಾವ ಅನುಕೂಲವೂ ಇಲ್ಲ, ಅದುದರಿಂದ ಮುನಿಸಿಪಾಲಿಟಿಗಳು ಅನುಕೂಲವನ್ನು ಮಾಡಿಕೊಡುವವರೆಗೆ ಟ್ಯಾಕ್ಸ್ ಹಾಕುವುದನ್ನು ರದ್ದುಮಾಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್ —ಟ್ಯಾಕ್ಸ್ ತೆಗೆದುಕೊಂಡು ಮಾಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ —ಮುನಿಸಿಪಾಲಿಟಿಯವರು ನಿರ್ಣಯ ಪಾಸ್ ಮಾಡಿ ಗವರ್ನಮೆಂಟ್ ಅಪ್ರೂವಲ್‌ಗೆ ಪ್ರಪೋಸಲ್ ಕಳಿಸಿಕೊಡುತ್ತಾರೆ ಎಂದು ತಾವು ಹೇಳಿದಿರಿ. ತಾವು ಅಪ್ರೂವಲ್ ಕೊಡುವಾಗ ಅಲ್ಲಿ ಬೇಕಾದ ವ್ಯವಸ್ಥೆಯನ್ನು ಮಾಡಿದ್ದಾರೆಯೇ ಇಲ್ಲವೇ ಎಂದು ವೆರಿಫೈ ಮಾಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಹನುಮೇಗೌಡರನ್ನು ನಾನು ತುಂಬಾ ಗೌರವದಿಂದ ಕಾಣುತ್ತೇನೆ. ಆದರೆ ಒಂದು ವಿಷಯವನ್ನು ಹೇಳುತ್ತೇನೆ. ಸೌಲಭ್ಯ ಕೊಟ್ಟ ಮೇಲೆ ಟ್ಯಾಕ್ಸ್ ಹಾಕುವುದಿಲ್ಲ, ಹಣ ಬಂದ ಮೇಲೆ ಸೌಲಭ್ಯ ಕೊಡಬೇಕಾಗುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.—ಹಾಗಾದರೆ, ಟ್ಯಾಕ್ಸ್ ಕೊಟ್ಟಾದ ಮೇಲೆ ವ್ಯವಸ್ಥೆ ಏಕೆ ಮಾಡಿಲ್ಲ ?

ಶ್ರೀ ಡಿ. ಕೆ. ನಾಯ್ಕರ್ —ಎಲ್ಲೆಲ್ಲಿ ವ್ಯವಸ್ಥೆಯಾಗಿಲ್ಲ ಎಂದು ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ಏನು ಮಾಡಬೇಕು ಎಂದು ಯೋಚನೆ ಮಾಡುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಮುನಿಸಿಪಾಲಿಟಿಯವರು ಆಕ್ಟ್ರಾಯ್ ಫಿಕ್ಸ್ ಮಾಡುವ ಬಗ್ಗೆ ರೆಸಲ್ಯೂಷನ್ ಪಾಸ್ ಮಾಡಿ, ಅಪ್ರೂವಲ್‌ಗೆ ಸರ್ಕಾರಕ್ಕೆ ಕಳಿಸುತ್ತಾರೆ ಎಂದು ತಾವು ಹೇಳಿದಿರಿ. ಆದರೆ ಅವರು ಕಳಿಸಿರುವ ಪ್ರಪೋಷಲ್ ಎಂದು, ಸರ್ಕಾರಕ್ಕೆ ಮಾಡಿರುವುದು ಒಂದು ಇದು ನಿಜವೇ. ನಿಜವಾದರೆ, ಇವರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡು ಸರಿಪಡಿಸಿ ಕೊಳ್ಳುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್,—ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಕೆಲವು ಮುನಿಸಿಪಲ್ ಕೌನ್ಸಿಲರ ಅಡ್ವಾಲರಂ 1 ಪರ್ಸೆಂಟ್ ಇರುತ್ತದೆ. ಕೆಲವರು ಒಂದು ಪರ್ಸೆಂಟ್‌ಗೆ ಕಳಿಸಿರುತ್ತಾರೆ. ಇನ್ನು ಕೆಲವರು 2 ಪರ್ಸೆಂಟ್ ಹಾಕ್ತೆ ಎಂದು ತಮ್ಮ ಆರ್ಥಿಕ ಸುಧಾರಣೆಯನ್ನು ಮಾಡಿಕೊಳ್ಳಲಿಕ್ಕೋಸ್ಕರ ಕಳಿಸಿರುತ್ತಾರೆ. ಕಕೂನ್ ಡೀಲ್ ಮಾಡುವವರ ಸಿಸ್ಟ್ ಡೀಲ್ ಮಾಡುವವರ ರೆಪ್ರೆಸೆಂಟೇಷನ್‌ನಿಂದ ಹೆರಾಸ್‌ಮೆಂಟ್ ಆಗುತ್ತಿದೆ ಎಂದು ಕಂಡುಬಂದಾಗ ರೆಡ್ಯೂಸ್ ಮಾಡಿ 2 ಪರ್ಸೆಂಟ್ ಇರುವುದನ್ನು ಅರ್ಧ ಪರ್ಸೆಂಟ್‌ಮಾಡಿ ಕಳಿಸುತ್ತೇನೆ.

ಶ್ರೀ ಸಿ. ಬೈರೇಗೌಡ.—ವಿಜಯನಗರ ಮತ್ತು ರಾಮನಗರ ಮುನಿಸಿಪಾಲಿಟಿಗಳು ಯಾವ ಕಾಲದಿಂದ ಆಕ್ಟ್ರಾಯನ್ನು ಹಾಕುತ್ತಿದ್ದಾರೆ ?

ಶ್ರೀ ಡಿ. ಕೆ. ನಾಯ್ಕರ್.—ಅದಕ್ಕೆ ನೋಟೀಸ್ ಬೇಕು.

ಶ್ರೀ ಸಿ. ಬೈರೇಗೌಡ.—ನನಗೆ ಗೊತ್ತಿರುವ ಹಾಗೆ ಅವರು 2 ವರ್ಷಗಳಿಂದ ಆಕ್ಟ್ರಾಯನ್ನು ಹಾಕುತ್ತಿದ್ದಾರೆ ಆದರೆ ಇಲ್ಲಿಯವರಗೂ ಸೌಕರ್ಯಗಳನ್ನು ಒದಗಿಸುವ ಬಾಬಿಗೆ ಒಂದು ನಯಾಪೈಸೆಯನ್ನೂ ಖರ್ಚುಮಾಡಿಲ್ಲ. ಅನ್ಯಾಯವಾಗಿ, ಅಕ್ರಮವಾಗಿ ರೈತರಿಂದ ಟ್ಯಾಕ್ಸ್‌ನ್ನು ಸುಲಗೆ ಮಾಡುತ್ತಿದ್ದಾರೆ.

(ಉತ್ತರ ಇಲ್ಲ)

Spread of Cholera Epidemic in Bijapur District

557. SRI J. L. KABADE (Balloi).—Will the Minister for Rural Development and Parchayatraj be pleased to state.—

(a) whether it has come to the notice of the Government that pure water is not being supplied to Indi, Sindagi and Bagevadi taluks of Bijapur District.